# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 19, ಸಂಜಯನಗರ. ಬೆಂಗಳೂರು.**

ಸಂಖ್ಯೆ: ಸ.ಅ/ವಾ-19/ಪಿ.ಆರ್/ /2022-23

ದಿನಾಂಕ:-30-07-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:-21-09-2020. ರವರ ಆದೇಶದಂತೆ ದಿನಾಂಕ:-30-07-2022 ರಂದು ವಾರ್ಡ್ ನಂ:19 ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೋಳುಲ್ಕರ್<br>ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ಸುರೇಂದ್ರಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು<br>ಸಹಾಯಕ ಅಭಿಯಂತರರು ವಾರ್ಡ್ ನಂ:19 | |
| 3. | ಶ್ರೀ. ಸಲ್ಮಾನ್ | ಹಿರಿಯ ಆರೋಗ್ಯ ಪರಿವೀಕ್ಷಕರು. | |
| 4. | ಕಂದಾಯ ಪರಿವೀಕ್ಷಕರು | ಕಂದಾಯ ಇಲಾಖೆ, ಬಿ.ಬಿ.ಎಂ.ಪಿ | |
| 5. | ವಾಟರ್ ಇನ್ಸ್‌ಪೆಕ್ಟರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಂಜಯನಗರ | |
| 6. | ಶ್ರೀ. ರವೀಂದ್ರನಾಥ್ | ಬಿ.ಬಿ.ಎಂ.ಪಿ ಅರಣ್ಯ ವಿಭಾಗ | |
| 7. | ತೋಟಗಾರಿಕಾ ಇನ್ಸ್‌ಪೆಕ್ಟರ್ | ತೋಟಗಾರಿಕಾ ಇಲಾಖೆ. | |
| 8. | ಪೋಲೀಸ್ ಅಧಿಕಾರಿಗಳು | ಸಂಜಯನಗರ ಪೋಲೀಸ್ ಠಾಣೆ | |
| 9. | ಸಂಚಾರಿ ಪೋಲೀಸ್ ಅಧಿಕಾರಿಗಳು | ಸಂಚಾರಿ ಪೋಲೀಸ್ ಠಾಣೆ,<br>ಆರ್.ಟಿ ನಗರ. | |
| 10. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 11. | ನಂದಿತ ಸುಬ್ಬರಾಂಪ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ. ಸುರೇಂದ್ರಕುಮಾರ್ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳುಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್‌ನ ರಸ್ತೆ ಬದಿಯಲ್ಲಿ ಜೋತು ಬಿದ್ದಿರುವ ಮರಗಳ ರಂಬೆ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸಲು ಬಿ.ಬಿ.ಎಂ.ಪಿ ಅರಣ್ಯ ರವರಿಗೆ ವಾರ್ಡ್‌ನ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
2. ಶ್ರೀ ವಿದ್ಯಾಶಿಲ್ಪಿ ವಿದ್ಯಾಸಂಸ್ಥೆ ಬಳಿ ತುಂಬಾ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುವುದರಿಂದ ಸಂಚಾರಿ ಪೋಲೀಸ್ ರವರಿಗೆ ಈ ಬಗ್ಗೆ ಕ್ರಮ ವಹಿಸಲು ವಾರ್ಡ್ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
3. ಸಂಜಯನಗರದಲ್ಲಿರುವ ಬೀದಿ ದೀಪಗಳ ದುರಸ್ಥಿಯ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
4. ಪಾದಚಾರಿ ಮಾರ್ಗದ ಒತ್ತುವರಿಯಾಗಿರುವುದನ್ನು ಗುರುತಿಸಿ ತೆರವುಗೊಳಿಸಲು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಕೋರಿರುತ್ತಾರೆ. ಅದರಂತೆ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.

5. ವಾರ್ಡ್ ವ್ಯಾಪ್ತಿಯಲ್ಲಿ ಮರದ ಕೊಂಬೆಗಳು ರಸ್ತೆಗಳಲ್ಲಿ ಬಿದ್ದಿರುವುದನ್ನು ತೆರವುಗೊಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.

6. ಸಂಜಯನಗರದಲ್ಲಿರುವ ಉದ್ಯಾನವನಗಳ ಬಗ್ಗೆ ವಾರ್ಡ್ ಸದಸ್ಯರು ರವರಿಗೆ ಉದ್ಯಾನವನಗಳ ದುರಸ್ಥಿ ಹಾಗೂ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿಗಳು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ವಾರ್ಡ್‌ನ ಅಧ್ಯಕ್ಷರು ಮುಂದುವರೆಯುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ. 19, ಸಂಜಯನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ.19, ಸಂಜಯನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.